

ಹೊಳೆಯ ಹರಿವಿಗೆ
ಕೊಳವೆಗಳ ಅಡ್ಡದಾರಿ



ಗ್ರಾಮೀಣ ಪರಿಸರದ ಕಥೆ ಹೇಳುವಂತಿರುವ
ಪಂಪ್‌ಸೆಟ್ ಬೋರ್ಡ್‌ಗಳು



ಜೀವಾಂಕುರದ ಗುಟ್ಟು
ಹೇಳುವಂತಿರುವ
ಕಲ್ಲಿನ ಆಕೃತಿ



‘ಮೂರನೇ’ ಕಣ್ಣಿಂದ ದೃಷ್ಟಿಸತೊಡಗಿದರು. ಹಾಗೆಂದು ವರ ಬಳಿ ಒಳ್ಳೆಯ ಕ್ಯಾಮೆರಾ ಏನೂ ಇರಲಿಲ್ಲ. ಇದ್ದುದು ಮೊಬೈಲ್ ಕ್ಯಾಮೆರಾ ಅಷ್ಟೇ. ಅದರ ಮೂಲಕವೇ ಪರಿಸರವೇ ಸೃಷ್ಟಿಸಿದ ‘ಪ್ರತಿಷ್ಠಾಪನೆ’ಗಳನ್ನು ಸೆರೆ ಹಿಡಿದರು. ತಮ್ಮ ಊರಷ್ಟೇ ಅಲ್ಲದೇ ಪಕ್ಕದ ಐಹೊಳೆ, ಪಟ್ಟದಕಲ್ಲು, ಕುಷ್ಟಗಿ ತಾಲ್ಲೂಕಿನ ಚಂದಾಲಿಂಗ ಇಲ್ಲೆಲ್ಲ ಅಲೆದಾಡಿದ್ದಾರೆ.

ಈ ದೃಶ್ಯಗಳನ್ನೊಮ್ಮೆ ನೋಡಬೇಕು. ವಾಸ್ತವದಲ್ಲಿ ನಾವು ಇವುಗಳನ್ನು ನೋಡಿದಾಗ ಉಂಟಾಗುವ ಅನುಭವವೇ ಬೇರೆ. ನಮ್ಮದು ಸಾಮಾನ್ಯ ನೋಟ, ಸಹಜ ಅನುಭವ. ಆದರೀಗ ನಾವು ಇವನ್ನು ಕಲಾವಿದನ ಕಣ್ಣಿನ ಮೂಲಕ ‘ಸ್ಥಿರಚಿತ್ರ’ದಲ್ಲಿ ನೋಡುತ್ತಿರುವಾಗ ಒಂದು ಬಗೆಯ ದೃಶ್ಯ ಕಲಾಕೃತಿಗಳ ಜೊತೆ ಮುಖಾಮುಖಿಯಾದಂತೆ ಅನ್ನಿಸುತ್ತಿದೆ. ಧಾನ್ಯಗಳನ್ನು ಸಂಗ್ರಹಿಸಿಡುವ ಗೋಣಿಚೀಲದಲ್ಲಿರುವ ಕಾಳುಗಳು ಚಿಗುರೊಡೆದು ಸಸಿಯಾಗಿ ನಿಂತಿವೆ. ಇದು ಎಲ್ಲವನ್ನು ತನಗಾಗಿ ಸಂಗ್ರಹಿಸುತ್ತ ಹೊರಟಿರುವ ಮನಷ್ಯನಿಗೆ ಸವಾಲೆಸೆದಂತಿದೆ. ನದಿ ನೀರನ್ನು ತಮ್ಮ ಜಮೀನಿಗೆ ಸೆಳೆಯಲು ರೈತರು ಅಳವಡಿಸಿರುವ ಪಂಪ್‌ಸೆಟ್ಟುಗಳು, ಪೈಪುಗಳು ಸಾಲಾಗಿ ಬಿದ್ದಿವೆ. ಹೊಳೆ ಮತ್ತು ಪಂಪ್‌ಸೆಟ್‌ಗಳ ಕೊಲಾಜ್, ಭೂಮಿಯೊಡಲ ಕರುಳುಬಳ್ಳಿಗಳು ತೆರೆದು ಬಿದ್ದಂತೆಯೇ ಭಾಸವಾಗುತ್ತದೆ.

ಕಲ್ಲು ಕುಟ್ಟರಿಯಲ್ಲಿ ಕುಳ್ಳು (ಬೆರಣಿ) ತಟ್ಟಿ ಇಟ್ಟಿರುವುದು ಬನ್‌ಗಳನ್ನು ಕಲ್ಲಬಟ್ಟಲಲ್ಲಿ